
ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಮರ್ಕಟಕ್ಕೇಕೆ ಮನವನ್ನು ಹೋಲಿಸಿದ್ದಾರೆ ರಾಮ್?



ಇದು ಕೊಂಬೆ–ಕೊಂಬೆಗೆ ಹಾರುವಂತೆಯೇ ಮನವೂ 'ಅದ ಕೊಂಬೆ', 'ಇದ ಕೊಂಬೆ' ಎಂದು ಹಾರುತ್ತಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು
ಉಪಮುಖ್ಯಮಂತ್ರಿಯ ವಿರುದ್ಧ ಪದ ಯಾವುದು?
ಉಪಾಯದ ಮುಖ್ಯಮಂತ್ರಿ ಎಂದನಂತೆ ಅಮಾತ್ಯ ರಾಕ್ಷಸ.

ಫಾಲನೇತ್ರ ಸಜ್ಜನ, ಶಿರಸಿ
ಹಾಸ್ಯದ ಇತಿಮಿತಿಗಳೇನು?
ಕೇಳುಗನಿಗೆ ರೋಚಕ ಎನಿಸಬೇಕು, ರೊಚ್ಚಿಗೇಳಿಸಬಾರದು.

ಮಂಡಿ ಕುಮಾರ್, ಬೆಂಗಳೂರು
ಬೃಹದಾಕಾರದ ಆನೆಯ ಕಣ್ಣುಗಳು ಸಣ್ಣದಾಗಿರಲು ಕಾರಣವೇನು?



ಆ ಎತ್ತರದಿಂದ ನೆಲದಲ್ಲಿನದನ್ನು ನೋಡಲು ಕಣ್ಣನ್ನು ಕಿರಿದಾಗಿಸಿಕೊಂಡೂ ಕೊಂಡೂ ಚಿಕ್ಕದಾಯಿತಂತೆ.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ
ಕಾಫಿಗೆ ಜಿಎಸ್‌ಟಿ ಸೇರಿಸಿ ಕುಡಿಯಬೇಕೇ?
ಅದನ್ನು 'ನೊರೆಕಾಸು' ಎಂದು ಕರೆಯುವರಂತೆ.

ದ್ವಾರಕಾನಾಥ್
ಬದುಕಿರುವವರು ಸತ್ತವರನ್ನು ಹೆಚ್ಚು ನೆನೆಯುವರೋ, ಸತ್ತವರು ಬದುಕಿರುವವರನ್ನು ಹೆಚ್ಚು ಸ್ಮರಿಸುವರೋ?
ಬದುಕಿರುವವರೇ. ಸತ್ತವರು ಇರುವವರನ್ನು ನೆನೆಯುವುದು ವರ್ಷಕ್ಕೊಮ್ಮೆ ಪಿಂಡ ಕೇಳಲು ಮಾತ್ರ.

ರಘುನಾಥರಾವ್ ತಾಪ್ಸೆ, ದಾವಣಗೆರೆ
ವಿಮಾನ ಅಪಘಾತದ ನಂತರ 'ಬ್ಲ್ಯಾಕ್ ಬಾಕ್ಸ್' ಎಂದು ಕರೆದರೂ ಅದರ ಬಣ್ಣ ಕಪ್ಪೇಕಿಲ್ಲ?
ಬಣ್ಣ ಕಪ್ಪಿಲ್ಲದಿದ್ದರೂ ಬಣ್ಣಿಸುವ ವಿಷಯ ಕರಾಳವಾಗಿರುತ್ತಲ್ಲ. ಅದರದು ಗುಣಾಧಾರಿತ ಹೆಸರು.

ಕೆ.ವಿ. ಗೋವಿಂದಾಚಾರಿ, ಮೈಸೂರು
ಬಡತನವು ಜೀವನಪಾಠವನ್ನು ಕಲಿಸುವುದು ಎನ್ನುತ್ತಾರೆ. ಸಿರಿತನ?
'ಜೀ ಹುಜೂರ್' ಎನ್ನಿಸಿಕೊಳ್ಳುವ ಪರಿಪಾಟವನ್ನು ಕಲಿಸುತ್ತದೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಕೆಲವರು ಎಲ್ಲವನ್ನೂ ಇಟ್ಟುಕೊಂಡಿದ್ದರೂ ಏಕಾಂಗಿ ಎಂದು ಹೇಳುವರಲ್ಲ?
ಅಂಗಿ ಒಂದೇ ಅಂತೆ. ಮಿಕ್ಕವೆಲ್ಲ ಜುಬ್ಬಾ, ಕುರ್ತಾ, ಟೀಶರ್ಟ್...

ಗಂಗಾದೇವಿ, ಬೆಂಗಳೂರು
ಐ.ಟಿ. ಮತ್ತು ಇ.ಡಿ. ಒಮ್ಮೊಮ್ಮೆ ದೆವ್ವ ಹಿಡಿದಂತೆ ಆಡುವುದೇಕೆ?
'ಹಗರಣ ನಡೆದಿದೆ' ಎಂದು ಕಿರುಚುವ ಭೂತಗಳ ತೃಪ್ತಿಗಾಗಿ.

ದುಂಡಪ್ಪ ನಂದೆನ್ನವರ, ಬೆಳಗಾಂವಿ
ಸತ್ತಮೇಲೂ ನಾವು ಗಳಿಸಿದ್ದನ್ನು ಕೊಂಡೊಯ್ಯುವಂತಿದ್ದರೆ ಏನಾಗುತ್ತಿತ್ತು?
ಸಾಯುವುದಕ್ಕೆ ಮುಂಚೆಯೇ ಹತ್ತಿರದವರು ಆ ಗಳಿಕೆಯನ್ನು ಹೊಡೆದು ತಿನ್ನುವುದಾಗುತ್ತಿತ್ತು.

ಕಾವ್ಯಶ್ರೀ, ಶೋರಾಪುರ
ನಮ್ಮ ಬದುಕಿನ ನಿರ್ದೇಶಕರು ಯಾರು?
ಕ್ರೋಮೊಸೋಮುಗಳು.

ಎಂ.ಸಿ. ಧನ್ಯತಾ, ಬೆಂಗಳೂರು
ನಿಜವಾದ 'ಅತಿಥಿ' ಹೇಗಿರಬೇಕು?
ಆತಿಥೇಯರ ತಿಥಿ ಆಗದಂತೆ.

ಮಹಾವೀರ ಕಾಸರ, ಶಿವಮೊಗ್ಗ
ವಿದ್ವತ್‌ಗೂ, ವಿದ್ಯುತ್‌ಗೂ ಏನು ವ್ಯತ್ಯಾಸ?
ವಿದ್ವತ್ತಿನಿಂದ ಕಾವ್ಯ, ವಿದ್ಯುತ್ತಿನಿಂದ ಕಾವು.


## ಬಹುಮಾನಿತ ಪ್ರಶ್ನೆ

ಬೂಕನಕೆರೆ ವಿಜೇಂದ್ರ, ಮೈಸೂರು
ಮದುವೆ ಆಗಬೇಕಾದ ಹುಡುಗರೇಕೆ ಗಡ್ಡ ಬಿಡುವುದು?
'ನಿನ್ನ ಕೈಗೆ ಜುಟ್ಟಷ್ಟೇ ಅಲ್ಲ, ಗಡ್ಡವನ್ನೂ ಕೊಡುವೆ. ಮನಬಂದಂತೆ ಎಳೆದೊಯ್ಯಿ' ಎಂದು ಸೂಚಿಸಲು.

ಬಿ. ಚಂದ್ರೇಗೌಡ, ಬೆಂಗಳೂರು
ರಾಜಕಾರಣಿಯಾಗಲು ಕನಿಷ್ಠ ಅರ್ಹತೆಯನ್ನು ನಿಗದಿಪಡಿಸಿಲ್ಲವೇಕೆ?
ಇದೆಯಲ್ಲ. ಕರುಣೆ, ಸದ್ವಿದ್ಯೆಯಲ್ಲಿ ಕನಿಷ್ಠವಾಗಿದ್ದರೆ ಸಾಕು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಮದುವೆಗೆ ಕಂಕಣ, ತಾಳಿ ಬೇಕು. ಡೈವರ್ಸ್‌ಗೆ?
ವಿಪ್ಲವ, ಥೈಲಿ.

ಬಾ.ರಂ. ಸುರೇಶ, ತುಮಕೂರು
ವೈದ್ಯಕೀಯ ಡಾಕ್ಟರೇಟ್‌ಗೂ, ಗೌರವ ಡಾಕ್ಟರೇಟ್‌ಗೂ ವ್ಯತ್ಯಾಸ?



ಇದರಲ್ಲಿ ವೈದ್ಯಕೀಯ ಹೆಚ್ಚು; ಅದರಲ್ಲಿ ರಾಜಕೀಯ ಹೆಚ್ಚು.

ಪಿ.ಎನ್. ಶ್ರೀವತ್ಸ, ಬೆಂಗಳೂರು
ದೇವಸ್ಥಾನಗಳಲ್ಲಿ ನಡೆಯುವ ಪ್ರವಚನಗಳಿಗೆ ಇತ್ತೀಚೆಗೆ ಜನಗಳೇ ಇರುವುದಿಲ್ಲವಲ್ಲ?
ಪಬ್ಲಿಕ್ ಮಾತಿನ ಮುಂದೆ ರಂಗನಾಥನ ಕಥೆಯೂ ಸಪ್ಪೆಯಂತೆ.

ಜಗದೀಶ ಬಿ. ಹೊಸೂರು, ಮೈಸೂರು
ಇತರ ಪ್ರಾಣಿಗಳಿಗಿಲ್ಲದ ಸ್ಮಶಾನ ಮನುಷ್ಯಪ್ರಾಣಿಗೆ ಏಕೆ ಬೇಕು?
ಸುಡದಿದ್ದರೆ/ತಲೆಯ ಮೇಲೆ ಚಪ್ಪಡಿ ಎಳೆಯದಿದ್ದರೆ ದೆವ್ವ ಆಗಿ ಕಾಡುವ ಭಯವಿದೆಯಲ್ಲ.

■ ರಾಮ್